ಇ) ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಮಾಹಿತಿ ಹಕ್ಕು ವಿಧೇಯಕ

4956 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಾಹಿತಿ ಹಕ್ಕು ವಿಧೇಯಕವನ್ನು ತರುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಇದರ ಸಾಧಕ ಬಾಧಕಗಳೇನು?

ಇ) ಇದರ ಗುಣಕ ಹಾಗೂ ಋಣಾತ್ಮಕ ಅಂಶಗಳ ಬಗ್ಗೆ ವಿವರಣೆ ನೀಡುವುದು?

ಈ) ಈ ವಿಧೇಯಕದಿಂದ ಶ್ರೀಸಾಮಾನ್ಯನಿಗೆ ಆಗುವ ಲಾಭವೇನು?

ಶ್ರೀ ಬಿ.ಕೆ. ಚಂದ್ರಶೇಖರ್ (ವಾರ್ತಾ ಸಚಿವರು) :

ಅ) ರಾಜ್ಯದಲ್ಲಿ ಮಾಹಿತಿ ಹಕ್ಕು ವಿಧೇಯಕದ ಆಧ್ಯಾದೇಶವನ್ನು ಹೊರಡಿಸಲಾಗಿದೆ.

ಆ), ಇ) ಮತ್ತು ಈ) ರಾಜ್ಯದ ನಾಗರೀಕರಿಗೆ ಮಾಹಿತಿಯನ್ನು ಪಡೆಯುವ ಅವಕಾಶದ ಹಕ್ಕಿಗಾಗಿ ಮತ್ತು ಆಡಳಿತದಲ್ಲಿ ಮುಕ್ತತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವುದರಿಂದ ಮತ್ತು ಜನರು ಆಡಳಿತದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದನ್ನು ಖಚಿತ ಪಡಿಸಿಕೊಳ್ಳುವುದರಿಂದ ಮತ್ತು ಆ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅರ್ಥಪೂರ್ಣವಾಗಿ ಮಾಡಲು ಆಧ್ಯಾದೇಶವನ್ನು ಹೊರಡಿಸಲಾಗಿದೆ.

ರಾಜ್ಯದ ಹೆದ್ದಾರಿಗಳ ಸುಧಾರಣೆ

4957 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹೆದ್ದಾರಿಗಳನ್ನು ಸುಧಾರಿಸಲು 500 ಕೋಟಿ ರೂಪಾಯಿಗಳ ನಿಧಿ ಸ್ಥಾಪಿಸುವ ಉದ್ದೇಶ ಸರ್ಕಾರದ ತೀರ್ಮಾನದಲ್ಲಿದೆಯೇ?

ಆ) ಈ ನಿಧಿ ಸ್ಥಾಪನೆಯ ಮುಖ್ಯ ಉದ್ದೇಶಗಳೇನು?

ಇ) ಹೆದ್ದಾರಿ ಸಮಸ್ಯೆ ಕುರಿತು ಅಧ್ಯಯನ ನಡೆಸಲು ರಾಜ್ಯ ಸರ್ಕಾರ ನೇಮಿಸಿದ್ದ ಕಾರ್ಯಪಡೆ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೆ? ವರದಿಯಲ್ಲಿನ ಪ್ರಮುಖ ಅಂಶಗಳಾವುವು?

ಈ) ಕಾರ್ಯಪಡೆ ನೀಡಿರುವ ವರದಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :